with respect to conduct of the Judge of Supreme Court or High Court in discharge of his duties. Article 221 of the Constitution has similar provisions in relation to Parliament. When a Judge of Supreme Court or High Court is appointed as Commission of enquiry under the Commission of Enquiry Act, 1952, his functions cannot strictly be termed as functions in discharge of his duties as a Judge but it has been held by the Supreme Court of India in Alok Kumar vs. Dr. S.N. Sharma (A.I.R. 1968, S.C. 453) that, while acting as Commission of Enquiry, the Judge does not demit office nor does he cease to be a judge of Supreme Court or the High Court. It is further held that appointment of Judge as Commission of enquiry does not deprive him of the rights and the privileges of a Judge of the High Court provisions of Article 211 of Constitution are mandatory.

Members should not say anything which is a reflection on any Judge of High Court or the Supreme Court. Deprecatory remarks against the Judges of High Court or Supreme Court cannot be made in the House. No aspersion can be made against them. The members have to bear in mind this limitation while participating in the discussion on this matter. The notice is admitted. The copies of the Report kept in the Notice Office may be collected by the members.

ಕುಲದೀಪ್ ಸಿಂಗ್ ಆಯೋಗದ ವರದಿಯ ಬಗ್ಗೆ ಚರ್ಚೆ

† SRI D.B. CHANDRE GOWDA:- Sir, with great respect I received the decision that you have given before the House. Now, do I take this report i.e., Kuldip Singh Commission Report as laid on the table of the House? Do I take this as deemed to have been placed on the table of the House?

MR. SPEAKER:- This House?

SRI D.B. CHANDRE GOWDA:- Yes, this House it is the first question. The next point is, the Report is under consideration of the Central Government. It is not the only case that properties belonging to Karnataka are involved in it. The allegations of FERA violations have been raised in the Kuldip Singh Commission Report. To my information and knowledge the Commission has gone into that also and if that is the case then it is not well within the purview of the State Government to go into the details of the Central Government like FERA, international and National Acts- the only competent authority to take action about those things is the Central Government. Second point,Sir, there are three courses open to the Central Government. One is that the Central Government may reject the Commmission's Report. I don't say it will or it may tabled on the table of both the Houses of Parliament. The Parliament may go into the details of it

and the Parliament may reject the report also then what is the consequence of our discussion here.

ಶ್ರೀ ಬಿ. ಸ್ವಾಮಿರಾವ್:- ಅಧ್ಯಕ್ಷರೇ, ಈಗ ಚರ್ಚೆ ಪ್ರಾರಂಭವಾಯಿತೋ ಏನೋ ನನಗೆ ಗೊತ್ತಾಗಲಿಲ್ಲ.

ಅಧ್ಯಕ್ಷರು:- ನಿಮ್ಮ ಈ ಸೃಷ್ಟೀಕರಣಗಳೆಲ್ಲವನ್ನೂ ಕೂಡ ಚರ್ಚೆಗೆ ಸಂಬಂಧಪಟ್ಟಹಾಗೆ ಕೇಳುತ್ತಿದ್ದೀರಿ ಎಂದು ನಾನು ಭಾವಿಸುತ್ತೇನೆ. ಚರ್ಚೆ ಶುರುವಾಗತಕ್ಕ ಕಾಲಕ್ಕೆ ಸೃಷ್ಟೀಕರಣಗಳಿಗೆ

ಶ್ರೀ ಡಿ.ಬಿ. ಚಂದ್ರೇಗೌಡ:- ಈಗ ಟೆಲಿಫೋನ್ ಟ್ಯಾಪಿಂಗ್ ಬಗ್ಗೆ ಚರ್ಚೆಮಾಡಿದೆವು. ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಉತ್ತರ ಕೊಟ್ಟರು. ಸಮಾಧಾನಕರವಾದ ಉತ್ತರವನ್ನು ಕೊಟ್ಟರು. ಅದರ ಬಗ್ಗೆ ನಾನು ಕಾಮೆಂಟ್ ಮಾಡುವುದಿಲ್ಲ. ಈ ಚರ್ಚೆಗೆ ತಾವು ಉತ್ತರ ಕೊಡುತ್ತೀರಾ ಎಂದು ನನಗೆ ಬೇಡವೆ ರೂಲ್ 68 ರಲ್ಲಿ ಚರ್ಚೆ ಆದರೆ ಉತ್ತರ ಕೊಡಬೇಕಲ್ಲ.ತಾವು ಉತ್ತರವನ್ನು ಕೊಡುವಾಗ ಇದರಲ್ಲಿ ಆಕ್ಷನ್ ಟೇಕನ್ ಏನು? ಅದಕ್ಕೆ ನಾನು ತಮಗೆ ಹೇಳಿದೆ.

(ಗೊಂದಲ)

ಅಧ್ಯಕ್ಷರು:- ಈಗ ವಿರೋಧಪಕ್ಷದ ನಾಯಕರು ಹೇಳುವುದನ್ನು ಕೇಳೋಣ ಈಗ ವಿರೋಧಪಕ್ಷದ ನಾಯಕರು ಆಕಡೆ ತಿರುಗಿ ನೋಡುವುದು ಬೇಡ, ಅದು ರಾಂಗ್ ಮೂಲೆ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ:- ಅಧ್ಯಕ್ಷರು...

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ನಿಮಗೆ ಕೊಡಲಿಕ್ಕೆ ಏನೂ ಇಲ್ಲ ಇದ್ದದ್ದು ಎಲ್ಲಾ ಕೊಟ್ಟಿದ್ದಾರೆ. ಇನ್ನೂ ಕೊಡಬೇಕು ಅಂದರೆ ಕೊಡುತ್ತಾರೆ. ಅದು ಏನು ದೊಡ್ಡದು ಅಲ್ಲ ಪ್ರಧಾನ ಮಂತ್ರಿ ಪಟ್ಟಕ್ಕೆ ರಾಜೀನಾಮೆ ಕೊಡುತ್ತಾರೆ.

MR. SPEAKER:- This is also a serious matter...

ಶ್ರೀ ಡಿ.ಬಿ.ಚಂದ್ರೇಗೌಡ:- ನನ್ನ ಮನಸ್ಸಿಗೆ ಏನು ಅನಿಸಿತು, if the discussions were to be effective and meaningful the evidences made available to the Commisson will go a long way. But the evidences are not available. This was an issue raised umpteen number of occasion on the floor of the Parliament... ನಾವು 300 ಪುಟದ್ದು ಒಂದು ರಿಪ್ಪೋರ್ಟ್ ಇಟ್ಟುಕೊಂಡು ಈ ಸದನದಲ್ಲಿ ಚರ್ಚೆ ಮಾಡಿದರೆ, ಚರ್ಚೆ ಅಪೂರ್ಣವಾಗುತ್ತದೆಂದು, ಈ ದೃಷ್ಟಿಯಿಂದ ನಾನು ಆ ಕಾರಣಕ್ಕೆ ವಿವರವಾಗಿ ವಿಚಾರವನ್ನು ಹೇಳಿದೆ. ಪ್ರೊಪ್ರೈಟ್ ಆಕ್ಟ್‌ನ್ನೇ ಪ್ರಸ್ತಾಪ ಮಾಡಿದೆ ನಾವು ಇಲ್ಲಿ ಚರ್ಚೆಯನ್ನು ಪ್ರಾರಂಭ ಮಾಡಿದರೆ, ರಾಜ್ಯ ಸರ್ಕಾರ ಈ ವರದಿಯ ಆಧಾರದ ಮೇಲೆ ಏನು ಆಕ್ಷನ್ ಇನಿಷಿಯೇಟ್ ಮಾಡುತ್ತದೆ ಎನ್ನುವುದು ನಮಗೆ ಬರಬೇಕು. ಅದಕ್ಕೆ ಹೇಳಿದೆ ಪ್ಲಾರಾ ವಯಲೇಷನ್ ಎಂದು ಆಗಿದ್ದರೆ, ಕೇಂದ್ರಸರ್ಕಾರ ಮಾಡಬೇಕು ರಾಜ್ಯದ ಆಸ್ತಿಗೆ ಸೀಮಿತ ಆಗಿದ್ದರೆ, ರಾಜ್ಯಸರ್ಕಾರ ಮಾಡಬೇಕು. ಇನ್ನು ಎರಡನೆಯ ವರ್ಗ ಏನು ಕೇಂದ್ರ ಸರ್ಕಾರ ಈ ವರದಿಯನ್ನು ಕರ್ನಾಟಕ ರಾಜ್ಯ ಸರ್ಕಾರದ ಪರಿಶೀಲನೆಗೆ ಕಳುಹಿಸಬಹುದು. ನಿಮ್ಮ ಪರಿಶೀಲನೆಗೆ ಅವರು ಕಳುಹಿಸಿದರೆ ಆಗ ನಿಮಗೆ ಅವರು ಏನು ಆಕ್ಷನ್ ತೆಗೆದುಕೊಂಡಿದ್ದಾರೆ ಎಂದು ಗೊತ್ತಿರುತದೆ. ನೀವು ಏನು ಆಕ್ಷನ್ ತೆಗೆದುಕೊಳ್ಳಬೇಕೆಂದು ಹೇಳಿದರೆ ಚರ್ಚೆಗೆ ಒಂದು ಎತ್ತರ ಬರುತ್ತದೆ. ಆದ್ದುದರಿಂದ ನಾನು ತಾವು ಕೊಟ್ಟರತಕ್ಕಂಥ ಆದೇಶವನ್ನು ಮಿರಿ ಮಾತನಾಡುತ್ತಿಲ್ಲ. ಚರ್ಚೆಗೆ ಬೇಕಾಗಿರತಕ್ಕಂಥ ವಸ್ತು ಬಹಳ ಮುಖ್ಯ ಕಾನ್‌ಸೀಕ್ವೆನ್ಸಸ್ ಆಫ್ ಡಿಸ್ಕಷನ್ ಮುಖ್ಯ. ಆದಕ್ಕಾಗಿ ನಾನು ಹೇಳಿದೆ. ಮೊದಲನೆಯದಾಗಿ ನಾವು ಇಲ್ಲಿ ಚರ್ಚೆ ಮಾಡಿದೆವು, ಕೇಂದ್ರ ಸರಕಾರ ಅಥವಾ ಸಂಸತ್ತೋ ಈವರದಿಯನ್ನು ತಿರಸ್ಕರಿಸಿ

ಬಿಟ್ಟರು, ಆದಕ್ಕೆ ಪೂರ್ವಭಾವಿಯಾಗಿ ಇದನ್ನು ಚರ್ಚೆ ಮಾಡಿದ ಹಾಗೆ ಆಗುತ್ತದೆ. ಇದರಿಂದ ಆಗತಕ್ಕಂಥ ಪರಿಣಾಮ ಏನು? ಏನು ಮಾಡಬೇಕು? ಒಂದು ವೇಳೆ ತಿರಸ್ಕರಿಸದೆ ನೀವು ಪರಿಶೀಲನೆ ಮಾಡಿ ಎಂದು ರಾಜ್ಯಸರಕಾರಕ್ಕೆ ಕಳುಹಿಸಿಕೊಟ್ಟರೆ, ಹೇಗೆ ಪರಿಶೀಲನೆ ಮಾಡುವುದು? ಪೂರ್ವಭಾವಿಯಾಗಿ ನಾವು ಒಂದು ಅಭಿಪ್ರಾಯವನ್ನು ವ್ಯಕ್ತಮಾಡಿಬಿಟ್ಟರೆ, ರಾಜ್ಯ ಸರಕಾರಕ್ಕೆ ಈ ಒಂದು ವರದಿಯ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಭಾಧಕವಾಗುವುದಿಲ್ಲವೇ, ಅಥವಾ ಒಂದು ವೇಳೆ ರಾಜ್ಯಸರಕಾರಕ್ಕೆ ಕಳುಹಿಸಿಕೊಡಬೇಕೆಂಬ ಅಭಿಪ್ರಾಯ ಕೇಂದ್ರ ಸರಕಾರಕ್ಕೆ ಇದ್ದರೆ, ನಾವು ಪೂರ್ವಬಾವಿಯಾಗಿ ಚರ್ಚೆ ಮಾಡಿದರೆ, ನಿರ್ಧಾರ ತೆಗೆದುಕೊಳ್ಳುವುದಕ್ಕೆ ತೊಂದರೆ ಆಗುವುದಿಲ್ಲವೇ? ನಾನು ಇದರ ಬಗ್ಗೆ ಹೆಚ್ಚು ಹೋಗುವುದಿಲ್ಲ. ಪಾರ್ಲಿಮೆಂಟರಿ ಪ್ರಾಕ್ಟೀಸ್ ಇರತಕ್ಕದ್ದು ಹೀಗೆ ಎಂದು ನನ್ನ ಮನಸ್ಸಿಗೆ ಅನ್ನಿಸುತ್ತದೆ. It is a very delicate issue. Anyway I felt we are opening a pandora's box and it is good..... ಈ ಒಂದು ವರದಿಯನ್ನು ಚರ್ಚೆ ಮಾಡಬಹುದು ಎಂದರೆ, ಇನ್ನು ಯಾವ ಯಾವ ವರದಿಗಳನ್ನು ಚರ್ಚೆ ಮಾಡಬೇಕು, ನಾನು ತಮಗೆ ನೋಟೀಸ್ ಕೊಟ್ಟು ಅನುಮತಿ ಪಡೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇದಕ್ಕಾಗಿ ನಾನು ತಮಗೆ ಅಭಿನಂದಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಸನ್ಮಾನ್ಯ ಅಧ್ಯಕ್ಷರೇ, ತಮ್ಮ ತೀರ್ಮಾನಕ್ಕೆ ನಾವು ತಲೆ ಬಾಗುತ್ತೇವೆ. ತಾವು ತೀರ್ಮಾನವನ್ನು ಓದಿ ಹೇಳತಕ್ಕಂಥ ಸಂದರ್ಭದಲ್ಲಿ ಇದರ ಪ್ಯಾರಾ ಮಿಸ್ಟರ್ಸ್ ಸಹ ಫಿಕ್ಸ್ ಮಾಡಿರುತ್ತೀರಿ. ಯಾರು ಆಯೋಗ ನೇಮಕ ಮಾಡಿದರು, ಯಾರು ಆಯೋಗದ ಸದಸ್ಯರಾಗಿದ್ದರು, ಅವರ ಬಗ್ಗೆ ಏನೂ ಸಹಿತ ಮಾತನಾಡತಕ್ಕಂಥಾದ್ದು ಸರಿಯಲ್ಲ ಆ ಚರ್ಚೆಗೆ ಅವಕಾಶ ಇಲ್ಲ ಎಂಬ ಮಾತನ್ನು ಹೇಳಿದ್ದೀರಿ. ಒಂದು ಹೆಜ್ಜೆ ಮುಂದೆ ಹೋಗಿ, ಈ ಆಯೋಗಕ್ಕೆ ಸಂಬಂಧಪಟ್ಟ ಆರೋಪಿ ಯಾರಿದ್ದಾರೆ, ಆ ಆರೋಪಿಯೂ ಸಹ ಈ ಸದನದ ಸದಸ್ಯರಿದ್ದಾರೆ ಅವರ ವಿಚಾರವನ್ನು ಸಹಿತ ತಿಳಿದುಕೊಳ್ಳಬೇಕಾಗುತ್ತದೆ. ಯಾವುದೇ ಈ ಸದನದ ಸದಸ್ಯರ ಕಾಂಡಕ್ಟ್ ಬಗ್ಗೆ ಇರಬಹುದು, ಅವರು ಮಾಡಿರತಕ್ಕಂಥ ಕೆಲಸದ ಬಗ್ಗೆ ಇರಬಹುದು, ಚರ್ಚೆ ಮಾಡಬೇಕಾದರೆ ಅವರೂ ಸಹಿತ ಇರಬೇಕಾಗುತ್ತದೆ. ಅವರಿಗೆ ನೋಟೀಸ್ ಸಹಿತ ಕೊಡಬೇಕಾಗುತ್ತದೆ. ಇದನ್ನು ಸಹ ಮಾಡತಕ್ಕದ್ದು ತಮಗೆ, ಹೊಸದೇನೂ ಅಲ್ಲ. ತಮಗೂ ಗೊತ್ತಿರತಕ್ಕ ವಿಚಾರ. ಇದರ ಹಿನ್ನೆಲೆಯಲ್ಲಿ ವಿಚಾರ ಮಾಡತಕ್ಕದ್ದು ಸರಿ ಎಂದು ನನ್ನ ಅಭಿಪ್ರಾಯ.

ಇನ್ನು ಎರಡನೆಯದಾಗಿ ಕೇಂದ್ರ ಸರಕಾರ, ಇನ್ನೂ ಈ ವರದಿ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆನ್ನುವ ಬಗ್ಗೆ ಸಾಕಷ್ಟು ಸಮಯ ಇದೆ. ಬೆಂಗಳೂರಿನ ಸಮೀಪದಲ್ಲಿರತಕ್ಕ ನೂರು ಎಕರೆ ಜಮೀನಿನ ವಿಚಾರ, ಕೇಂದ್ರ ಸರಕಾರ ಏನೋ ಒಂದು ರಾಜಕೀಯ ಉದ್ದೇಶಕ್ಕೋಸ್ಕರ ತಡ ಮಾಡುತ್ತಿದೆ, ಅಥವಾ ಮುಚ್ಚಲಿಕ್ಕೆ ಪ್ರಯತ್ನ ಮಾಡುತ್ತಿದೆ, ಎಂಬುದನ್ನು ಹೇಳುವುದಕ್ಕೆ ಆಸ್ಪದ ಇಲ್ಲ. ಏತಕ್ಕೆಂದರೆ 110 ಎಕರೆ ಜಮೀನನ್ನು ಕೊಡಬೇಕೆಂಬ ಪ್ರಪೋಸಲ್‌ನ್ನು ಬಿ.ಡಿ.ಎ. ಸರಕಾರದ ಮುಂದೆ ತೆಗೆದುಕೊಂಡು ಬಂದಿದ್ದರೂ, ಆ ಪ್ರಪೋಸಲ್‌ನ್ನು ನಮ್ಮ ಸರ್ಕಾರವೇ ಕ್ಯಾನ್ಸಲ್ ಮಾಡಿತ್ತು. ಏನೂ ಲೂಟಿ ಮಾಡಿಲ್ಲ, ಮನಿ ಟ್ರಾನ್ಸ್‌ಸ್ಯಾಕ್ಷನ್ ಏನೂ ನಡೆದಿರಲಿಲ್ಲ. ಆದುದರಿಂದ ಏತಕ್ಕೆ ಇವರು ತಟಸ್ಥರಾಗಿದ್ದರು, ಏತಕ್ಕೆ ಆಕ್ಷನ್ ತೆಗೆದುಕೊಳ್ಳಲಿಲ್ಲ ಇವರು ಅಬೆಟರ್ ಎಂಬ ತೀರ್ಮಾನ ಏನಿದೆ ಇದರ ಬಗ್ಗೆ ಕೇಂದ್ರ ಸರಕಾರದವರು ಕ್ರಮವನ್ನು ತೆಗೆದುಕೊಳ್ಳುವುದಿಲ್ಲವೋ ಏನೋ ಎಂಬ ನಮ್ಮಲ್ಲಿ ಅನೇಕರಿಗೆ ಬಂದಹಾಗೆ ಕಾಣುತ್ತದೆ. ಇದಕ್ಕೆ ಸಮಯ ಕೊಡಬಹುದಾಗಿತ್ತು. ಅಲ್ಟಿಮೇಟ್‌ಲಿ ಕೇಂದ್ರ ಸರಕಾರ ಸ್ಟೇಟ್ ಗೌರ್ನ್‌ಮೆಂಟ್‌ಗೆ ಹೇಳಬಹುದು, ನೀವೇ ಆಕ್ಷನ್ ತೆಗೆದುಕೊಳ್ಳಬಹುದೆಂದು ಹೇಳಬಹುದು, ಅದನ್ನು ಮಾಡದೇ ಇದ್ದರೂ, ಲೋಕಸಭೆ ಮತ್ತು ರಾಜ್ಯ ಸಭೆಗಳು ಇದನ್ನು ಚರ್ಚೆ ಮಾಡಿ, ಕೇಂದ್ರ ಸರಕಾರ ಸಹಿತ ಇದರ ಮೇಲೆ ಏನು ಆಕ್ಷನ್ ತೆಗೆದುಕೊಳ್ಳಬೇಕೆಂಬ ಸಲಹೆಯನ್ನು ರಾಜ್ಯ ಸರಕಾರಕ್ಕೆ ಕೊಟ್ಟು, ಆದಾದ ನಂತರ ರಾಜ್ಯ ಸರಕಾರ ಏನು ಮಾಡಬೇಕೆಂಬುದರ ಬಗ್ಗೆ ಕ್ರಮ ತೆಗೆದುಕೊಳ್ಳಬಹುದು. ಇದು ಒಂದು ಭಾಗ ಆಯಿತು. ಎರಡನೆಯದಾಗಿ, ಇದಲ್ಲದೆ, ಕುಲದೀಪ್ ಸಿಂಗ್ ಆಯೋಗದ ವರದಿ ಅಲ್ಲದೆ, ಎನ್.ಆರ್.ಐ. ಬಗ್ಗೆ ಕರ್ನಾಟಕ ರಾಜ್ಯದಲ್ಲಿ

ಆಗಿರತಕ್ಕಂಥ ಡೀಲಿಂಗ್ಸ್ ಬಗ್ಗೆ ಸೆಪರೇಟ್ ಆಗಿ ಡಿಸ್ಕಸ್ ಮಾಡತಕ್ಕದ್ದೂ ಅವರು ವಿಚಾರ ಮಾಡಬಹುದಾಗಿತ್ತು. ಈ ಹಿನ್ನೆಲೆಯಲ್ಲಿ ತಾವು ತಮಗೆ ತಿಳಿಸಬೇಕು. ತಾವು ಪ್ಯಾರಾಮೀಟರ್ಸ್‌ನ್ನು ಏನಾದರೂ ಫಿಕ್ಸ್ ಮಾಡಿದ್ದೀರಾ? ಕೇಂದ್ರ ಸರ್ಕಾರಕ್ಕೆ ಜವಾಬ್ದಾರಿ ಇರತಕ್ಕ ಸಂದರ್ಭದಲ್ಲಿ ನಾವು ಇಲ್ಲಿ ಚರ್ಚೆಮಾಡತಕ್ಕದ್ದು ಅವಸರದ ಕ್ರಮ ಅಲ್ಲವೆ ಎಂಬುದನ್ನು ತಿಳಿಸಬೇಕು.....

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ ಕುಲದೀಪ್ ಸಿಂಗ್ ವರದಿಯನ್ನು ಚರ್ಚೆ ಮಾಡಬೇಕೆಂದು ಎರಡೂ ಕಡೆಯ ಮಾನ್ಯ ಸದಸ್ಯರು ಇಲ್ಲಿ ತಮ್ಮ ಗಮನಕ್ಕೆ ತಂದಿರತಕ್ಕಂಥದ್ದು ಸತ್ಯ. ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಸಿಂಧ್ಯರವರು ಅವರದೇ ಆದ ರೀತಿಯಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಈ ಸಭೆಯ ಸದಸ್ಯರಾದ ಅವರನ್ನು ತಾವು ಕರೆಸಬೇಕು ಎಂದು. ಆದರೆ ಇದು ನನಗನಿಸುತ್ತದೆ. ಈ ಸಭೆಯ ಯಾವುದೇ ಸದಸ್ಯರಿಗಾಗಲಿ ಪ್ರತ್ಯೇಕವಾಗಿ ನೋಟೀಸನ್ನು ಕಳುಹಿಸಿ ತಾವು ಸಭೆಗೆ ಬರಬೇಕೆಂದು ಹೇಳತಕ್ಕದ್ದು ಸಂಪ್ರದಾಯ ಅಲ್ಲ. ಏಕೆಂದರೆ, ಈ ಸಭೆ ನಡೆಯುವಾಗ ಸಾಮಾನ್ಯವಾಗಿ ನಾವು ಇಲ್ಲಿರಬೇಕಾದದ್ದು ನಮ್ಮ ಕರ್ತವ್ಯ. ಪ್ರತಿದಿನ ನಮ್ಮ ಭಾಷಣ ಬರಬಹುದು, ಚರ್ಚೆ ಬರಬಹುದು ಎಂದು ನಾವು ಇಲ್ಲಿ ಕುಳಿತಿರಬೇಕು. ಆದುದರಿಂದಲೇ ನಮ್ಮ ಜನರು ನಮ್ಮನ್ನು ಆಯ್ಕೆ ಮಾಡಿ ಇಲ್ಲಿಗೆ ಕಳುಹಿಸಿರತಕ್ಕದ್ದು. ಒಂದು ವೇಳೆ ನಾನು ಸಭೆಯಲ್ಲಿರುವುದಿಲ್ಲವೆಂದು ಹೇಳುವುದಾದರೆ ನಾವು ಮುಂಚಿತವಾಗಿ ತಮಗೆ ಬರೆದು ತಿಳಿಸಬೇಕಾಗುತ್ತದೆ. ಆಗ ಸಂಬಂಧಪಟ್ಟ ಸದಸ್ಯರನ್ನು ಸಭೆಗೆ ಕರೆಯಿಸಿ ಅವರ ಮುಂದೆ ಈ ವಿಷಯವನ್ನು ಚರ್ಚೆ ಮಾಡಬೇಕೆಂದು ಹೇಳತಕ್ಕ ಪ್ರಶ್ನೆ ಉದ್ಭವವಾಗುವುದಿಲ್ಲ. ಈಗ ಕುಲದೀಪ್ ಸಿಂಗ್ ವರದಿ ಬಹಿರಂಗವಾಗಿದೆ. ಇದು ನಮ್ಮ ಕರ್ನಾಟಕಕ್ಕೆ ಅತಿ ಮುಖ್ಯವಾಗಿ ಹತ್ತಿರದಲ್ಲಿರತಕ್ಕದ್ದು. ದೂರವಾಣಿ ಕದ್ದಾಲಿಕೆಯ ಬಗ್ಗೆ ಚರ್ಚೆ ನಡೆಯಬೇಕೆಂದು ನಮ್ಮಲ್ಲಿ ಒತ್ತಾಯವಿದ್ದರೂ ಕೂಡ ಅತಿ ಜಾಗ್ರತೆಯಿಂದ ಈ ಚರ್ಚೆಯನ್ನು ಬಯಸಿದವರು ಆ ಕಡೆ ಇರತಕ್ಕ ಆಡಳಿತ ಪಕ್ಷದ ಸದಸ್ಯರು. ಇವತ್ತು ಈ ವರದಿ ಬಹಿರಂಗವಾಗಿರುವಾಗ, ಇಲ್ಲಿ ಸಭೆ ನಡೆಯುವಾಗ ಸಾರ್ವಜನಿಕರು ಬಂದು ನಮ್ಮನ್ನು ಕೇಳುತ್ತಾರೆ, ಕುಲದೀಪ್ ಸಿಂಗ್ ವರದಿ ಬಂದರೂ ನೀವು ಏತಕ್ಕೆ ಅದರ ಬಗ್ಗೆ ಏನನ್ನೂ ಮಾತನಾಡಲಿಲ್ಲವಲ್ಲಾ ಎಂದು. ಇದು ತಾತ್ವಿಕವಾಗಿ ಚರ್ಚೆಯಾಗಬೇಕೆಂಬುದು ನಮ್ಮ ಇಚ್ಛೆ. ಆದರೆ ತಾತ್ವಿಕತೆಯನ್ನು ಬಿಟ್ಟು ಚರ್ಚೆಯಾಗಬೇಕೆಂದು ಹೇಳುವುದು ಅವರಿಗೆ ಸೇರಿದ್ದುದು. ನಾನು ಅದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನಾದರೂ ಹೇಳುತ್ತೇನೆ, ಆ ಚರ್ಚೆ ಹೊರಗೆ ಬರಲಿ. ಅದರಲ್ಲಿ ಏನು ಸತ್ಯಾಸತ್ಯತೆಗಳಿವೆ ಎಂಬುದು ಗೊತ್ತಾಗಲಿ. ಯಾರು ಹಣವನ್ನು ಕೊಟ್ಟಿದ್ದಾರೆ, ಅದರಲ್ಲಿ ಏನಾಗಿದೆ ಎಂಬ ಸತ್ಯಾಂಶ ಹೊರಗೆ ಬರಲಿ. ಇಲ್ಲಿ ಚರ್ಚೆ ನಡೆಯಲಿಕ್ಕೆ ತಾವು ಅವಕಾಶ ಮಾಡಿಕೊಡಬೇಕು. ತಮ್ಮ ತೀರ್ಪಿಗೆ ತಾವು ತಲೆಬಾಗುತ್ತೇವೆ. ತಮ್ಮ ತೀರ್ಪು ಸರಿಯಿಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ದಯವಿಟ್ಟು ಚರ್ಚೆಗೆ ಒಂದು ದಿನವನ್ನು ನಿಗದಿತ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದು ಚರ್ಚೆ ನಡೆದು ಬಹಿಂಗವಾಗಲಿ. ಒಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಇವತ್ತು ಈ ದೇಶದ ಮಾನ್ಯ ಪ್ರಧಾನ ಮಂತ್ರಿಗಳೂ ಕೂಡ ರಾಜೀನಾಮೆಯನ್ನು ಕೊಡುತ್ತಾರೆಂದು ಹೇಳುತ್ತಿದ್ದಾರೆ. ಅದು ಪತ್ರಿಕೆಗಳಲ್ಲಿ ಬರುತ್ತಿದೆ. ಅದು ಸುದ್ದಿ ಸಂಸ್ಥೆಗಳಲ್ಲಿ ಬರುತ್ತಿದೆ. ಈಗ ಸಭೆ ನಡೆಯುತ್ತಿರುವುದರಿಂದ ನಾನು ಹೇಳುತ್ತಿದ್ದೇನೆ. ಒಂದು ದೇಶದ ಪ್ರಧಾನ ಮಂತ್ರಿಗಳು ಪೌಲ್ಯಾಧಾರಿತವನ್ನು ಎತ್ತಿಹಿಡಿದು ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡತಕ್ಕ ಅಕಾಶದ ಎತ್ತರಕ್ಕೆ ಹೋಗಿರತಕ್ಕ ವಿಷಯ ಈ ಸಭೆಯ ಗಮನಕ್ಕೆ ಬರುತ್ತಿದೆ. ಆದ್ದರಿಂದ ನಾನು ಕೇಳುತ್ತಿದ್ದೇನೆ. ಈ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ, ಇಲ್ಲವೇ? ಅಥವಾ ಮಾನ್ಯ ಮುಖ್ಯ ಮಂತ್ರಿಗಳು ಈ ರಾಜ್ಯದ ಬಗ್ಗೆ, ಈ ದೇಶದ ಬಗ್ಗೆ ವಿಚಾರಗಳನ್ನು ತಿಳಿದಿರಬೇಕು. ಅವರಾದರೂ ಇದರ ಬಗ್ಗೆ ಸ್ವಲ್ಪ ಮಟ್ಟಿನ ಬೆಳಕನ್ನು ಚೆಲ್ಲಬೇಕು. ಸುದ್ದಿ ಸಂಸ್ಥೆಗಳವರು ಮೈಲಿಗಟ್ಟಲೆ ದೂರ ಹೋಗಿ ಸುದ್ದಿಯನ್ನು ಹರಡುತ್ತಿದ್ದಾರೆ. ಆದ್ದರಿಂದ ದಯವಿಟ್ಟು ತಮಗೇನಾದರೂ ಕೇಂದ್ರ ಸರ್ಕಾರದಿಂದ ವರದಿ ಬಂದಿದ್ದರೆ...

ಅಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರು ನನ್ನ ರೂಲಿಂಗ್ ಬಗ್ಗೆ ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಮೊದಲನೆಯದು ಎಂದರೆ, ಈ ಸ್ಟೇಟ್ ಗೌರ್ನ್‌ಮೆಂಟ್ ಏನು ಆಕ್ಷನ್ ತೆಗೆದುಕೊಳ್ಳುತ್ತದೆ ಎಂದು. ನಾನು ಕೊಟ್ಟಿರತಕ್ಕ ರೂಲಿಂಗ್ ಏನೆಂದರೆ ಕುಲದೀಪ್ ಸಿಂಗ್ ವರದಿಯನ್ನು ಡಿಸ್ಕಸ್ ಮಾಡುತ್ತೇವೆ ಎಂದು ಅಲ್ಲ. ಆದರಿಂದ ಉದ್ಭವಿಸುವ ಪರಿಸ್ಥಿತಿಯನ್ನು ನಾವು ಚರ್ಚಿಮಾಡೋಣ ಎಂದು.

ಶ್ರೀ ವಾಟಾಳ್ ನಾಗರಾಜ್ :- ಒಂದೊಂದು ಹೇಳುವಾಗ ಇಂಥದ್ದು ಬರುತ್ತದೆ.

ಅಧ್ಯಕ್ಷರು:– ಕಾನ್‌ಸ್ಟಿಟ್ಯೂಷನ್‌ನಲ್ಲಿ ಇರತಕ್ಕದ್ದೂ ಕೂಡ ಕೇವಲ ಪದ ಪ್ರಯೋಗವೇ ಅಲ್ಲವೆ? ಯಾವ ಸಂದರ್ಭದಲ್ಲಿ ಯಾವ ಪದವನ್ನು ಉಪಯೋಗಿಸಬೇಕೆಂಬುದು. ಆದ್ದರಿಂದ ಈ ವಿಚಾರದಲ್ಲಿ ಉದ್ಭವವಾಗಿರತಕ್ಕ ಸನ್ನಿವೇಶವನ್ನು ಮಾತ್ರ ಸಭೆಯಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿರತಕ್ಕದ್ದು. ಇನ್ನು ಎರಡನೆಯದಾಗಿ ಈ ಸರ್ಕಾರ ಆಕ್ಷನ್ ರಿಪೋರ್ಟ್‌ನ್ನು ಸಭೆಯ ಮುಂದಿಡಬೇಕಾಗಿಲ್ಲ. ಏಕೆಂದರೆ ಈ ಸರ್ಕಾರದವರು ಆ ಕಮಿಷನ್‌ನ್ನು ನೇಮಕ ಮಾಡಿಲ್ಲ. ಇದರ ಜವಾಬ್ದಾರಿ ಕೇಂದ್ರ ಸರ್ಕಾರಕ್ಕೆ ಸೀಮಿತವಾಗಿದೆ. ಎರಡನೆಯದು ಈ ಸರ್ಕಾರ ಆಕ್ಷನ್ ರಿಪೋರ್ಟ್‌ನ್ನು ಸಭೆಯ ಮುಂದೆ ಇಡಬೇಕಾಗಿಲ್ಲ. ಏತಕ್ಕೆಂದರೆ ಈ ಸರ್ಕಾರ ಆ ಕಮಿಷನ್‌ನ್ನು ನೇಮಕ ಮಾಡಿಲ್ಲ. ಆದರ ಜವಾಬ್ದಾರಿ ಕೇಂದ್ರ ಸರ್ಕಾರಕ್ಕೆ ಸೀಮಿತವಾಗಿರತಕ್ಕಂಥದ್ದು. ಆದ್ದರಿಂದ ಆ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಮೂರನೆಯದು ರೂಲ್ 68 ಏನು ಹೇಳುತ್ತದೆಂದರೆ ಜರೂರಾಗಿರತಕ್ಕಂಥ ವಿಚಾರ ಸಾರ್ವಜನಿಕ ಮಹತ್ವವಾದಂಥ ವಿಚಾರ ಆದರ ಬಗ್ಗೆ ಒಂದು ಚರ್ಚೆ ಅಷ್ಟೆ. ಅಷ್ಟಕ್ಕೆ ಸೀಮಿತವಾಗಿ ಚರ್ಚೆ ಮಾಡಬೇಕು ಎಂದು ನಾನು ಹೇಳಿರುವುದು.

ಶ್ರೀ ಡಿ.ಬಿ. ಚಂದ್ರೇಗೌಡ:– ಮಾನ್ಯ ಅಧ್ಯಕ್ಷರೇ ಮುಖ್ಯವಾವ ವಿಚಾರವನ್ನು ತಮ್ಮ ಮೂಲಕ ಅವರು ಹೇಳಿದ್ದಾರೆ. ಆದರೆ ತಾವು ವರದಿಯನ್ನು ಚರ್ಚೆ ಮಾಡುವುದಿಲ್ಲವೆಂದು ಹೇಳಿದಿರಿ. ಮುಂದೆ ತಮ್ಮ ತೀರ್ಪಿನಲ್ಲಿ ವರದಿ ಮತ್ತು ಚರ್ಚೆಗೆ ಎರಡನ್ನು ಸೇರಿಸಿಮಾಡತಕ್ಕಂಥ ಪ್ರಕರಣ ಬಂದರೆ ಚರ್ಚೆ ಮಾಡುವಲ್ಲಿ.....

ಅಧ್ಯಕ್ಷರು:– ಆಗಿನ ಪ್ರಿಸೈಡಿಂಗ್ ಆಫೀಸರ್ಸ್ ಕಾನ್‌ಫರೆನ್ಸ್‌ನಲ್ಲಿ ಸ್ಪೀಕರ್ ಮಿಲಾನ್‌ರವರನ್ನು ಉದಾಹರಿಸಿದೆ.

ಶ್ರೀ ಡಿ.ಬಿ. ಚಂದ್ರೇಗೌಡ:– ನನ್ನದು ಏನೆಂದರೆ ಒಂದು ವೇಳೆ ಈ ಚರ್ಚೆ ಕೇಂದ್ರ ಸರ್ಕಾರ ತೆಗೆದುಕೊಂಡಂಥ ಆಕ್ಷನ್ ಆದಕ್ಕೆ ಇನ್‌ಫ್ಲೂಯನ್ಸ್ ಆಗುತ್ತದೆ ಎನ್ನುವುದು ಒಂದು. ನಾವು ಇಲ್ಲಿ ಚರ್ಚೆ ಮಾಡಿದ ಮೇಲೆ ರಾಜ್ಯ ಸರ್ಕಾರಕ್ಕೆ ವರದಿಯನ್ನು ವಾಪಸ್ ಕಳುಹಿಸಿಕೊಡಬೇಕೆಂದು ತೀರ್ಮಾನ ಮಾಡಿದರೆ ಆಗ ಅವರಿಗೆ ಇರತಕ್ಕಂಥ ಅವಕಾಶ ಸದನದ ಮುಂದೆ ಇಡತಕ್ಕಂಥ ಅವಕಾಶವೇನಿದೆ ಆದನ್ನು ಈಗಲೇ ಚರ್ಚೆ ಮಾಡಿ, ಏತಕ್ಕೆ ಕಾಲ ಕಳೆಯಬೇಕು ಎನ್ನುವುದು ಒಂದು. ಈ ಚರ್ಚೆಗೆ ಆಕ್ಷನ್ ಟೇಕನ್ ರಿಪೋರ್ಟ್ ವರದಿ ಇದರ ಜೊತೆಗೆ ಬರಬೇಕಾಗಿತ್ತು. ಅದು ಇಲ್ಲದೆ ಇರುವುದರಿಂದ ಈ ಚರ್ಚೆಗೆ ಆದರಿಂದ ಸಮಸ್ಯೆ ಉದ್ಭವವಾಗುವುದಿಲ್ಲ. ಪಬ್ಲಿಕ್ ಇಂಟರೆಸ್ಟ್‌ನಲ್ಲಿ ಏನಾಗಿದೆ ಎಂದರೆ ವರದಿ ಬಂದಿದೆ ಎಂದು ಅಷ್ಟೆ. ಪ್ರತಿಯೊಂದು ಹೀಗೆ ಮ್ಯಾನ್ಡೇಟರಿ ಪ್ರಾವಿಷನ್ ಇದೆ. ಸದಾನಂದ ಕಮಿಷನ್ ರಿಪೋರ್ಟ್‌ನಲ್ಲಿ ಆಕ್ಷನ್ ಟೇಕನ್ ವರದಿ ಬಂದಿತ್ತೇನು? ಈ ಹೌಸ್‌ನಲ್ಲಿ ಆದನ್ನು ಚರ್ಚೆ ಮಾಡಲಾಗಿದೆಯೇ? ಹೌಸ್‌ನಲ್ಲಿ ಇಟ್ಟಿದ್ದಾರೆ. ಸದಾನಂದ ಸ್ವಾಮಿ ವರದಿ ಇಟ್ಟರು ಅಷ್ಟೇ. ಆಕ್ಷನ್ ಟೇಕನ್ ರಿಪೋರ್ಟ್ ಇಲ್ಲದೆ ಚರ್ಚೆ ಮಾಡಬಹುದೇ? ಆದ್ದರಿಂದ ಇದು ಒಂದಕ್ಕೊಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿರತಕ್ಕಂಥ ವರದಿಯಲ್ಲಿ ಮುಂದೆ ತೆಗೆದುಕೊಳ್ಳಬಹುದಾದಂಥ ನಿದರ್ಶನಗಳಿಗೆ ಚರ್ಚೆಗೆ ಸಹಾಯವಾಗುತ್ತದೆಂದು ಹೇಳಿ ನಾನು ಅಂದುಕೊಂಡಿಲ್ಲ. ಆದ್ದರಿಂದ ಇದು ಅವಸರದ ಚರ್ಚೆಯಾಗತ್ತದೆನ್ನುವ ದೃಷ್ಟಿಯಿಂದ ಹೇಳಿದೆ.

ಶ್ರೀ ಎಂ. ವೀರಪ್ಪಮೊಯಿಲಿ:– ಮಾನ್ಯ ಅಧ್ಯಕ್ಷರೇ ಈ ರೂಲ್ ನಿಯಮ 68ರ ಪ್ರಕಾರ ಕೆಲವು ಮಾನ್ಯ ಸದಸ್ಯರು ತಮಗೆ ಸೂಚನೆ ಕೊಟ್ಟಿದ್ದಾರೆ. ಈಗ ಅದರ ಪ್ರಕಾರ ಔಚಿತ್ಯದ ಪ್ರಶ್ನೆ ಮೊನ್ನೆ ಪ್ರಸ್ತಾಪವಾಯಿತು. ಅದರ ಮೇಲೆ ತೀರ್ಪನ್ನು ಕೊಟ್ಟಿದ್ದೀರಿ. ತೀರ್ಪಿನ ಬಗ್ಗೆ ತಾವು ಇಂಟರ್‌ಪ್ರಿಟೇಷನ್ ಕೊಡುವಂಥ ಸಮಯದಲ್ಲಿ ಅವಸರದ ಪ್ರಶ್ನೆ ಉದ್ಭವವಾಗುವುದಿಲ್ಲ. ಏತಕ್ಕೆಂದರೆ ಅವಸರ ನಮಗೆ ಇಲ್ಲ. ಪಾರ್ಲಿಮೆಂಟ್ ಲೈಬ್ರರಿಯಲ್ಲಿ ಜರೂರಾಗಿ ಈ ವರದಿಯನ್ನು ಇಟ್ಟುಬಿಟ್ಟಿದ್ದಾರೆ. ಬಹುಶಃ ಅವಸರ ಇಲ್ಲಿಗಿಂತ ಮೇಲೆ ಆಗಿದ್ದೆ ಒಳ್ಳೆಯದೆಂದು ಕಾಣುತ್ತದೆ. ಏತಕ್ಕೆಂದರೆ ನಮ್ಮ ಪ್ರಶ್ನೆ ಇಲ್ಲ. ಅಲ್ಲಿ ಅವರು ಅವಸರ ಏನಾದರೂ ಮಾಡಿದ್ದರೆ ಅದಕ್ಕೆ ನಾವು ಕಾರಣರಲ್ಲ.

MR. SPEAKER:- Would the Minister yield for a minute? I think I entirely agree with him. ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಚರ್ಚೆ ಮಾಡಬೇಕೆಂದು ಕೇಳಿದಾಗ, ಈ ಚರ್ಚೆಗೆ ವರದಿ ನಮ್ಮ ಕೈ ಸೇರಿಲ್ಲ. ವರದಿಯಲ್ಲಿ ಏನಿದೆ ಎನ್ನುವುದೂ ಗೊತ್ತಿಲ್ಲ. ಆದ್ದರಿಂದ ಅದನ್ನು ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲವೆಂದು ಹೇಳಿದ್ದೆ. ಈ ವರದಿ ಬಹಿರಂಗವಾಗದಿದ್ದರೆ, ಪಬ್ಲಿಕ್ ಡಾಕ್ಯುಮೆಂಟ್ ಆಗದೆ ಹೋಗಿದ್ದರೆ ಬಹುಶಃ ನಾವು ಇದನ್ನು ಚರ್ಚೆಗೆ ತೆಗೆದುಕೊಳ್ಳತಕ್ಕಂಥ ಪ್ರಶ್ನೆ ಮುಂದೆ ಹೋಗುತ್ತಿತ್ತು. ಆದ್ದರಿಂದ ಪಬ್ಲಿಕ್ ಡಾಕ್ಯುಮೆಂಟ್ ಯಾವಾಗ ಆಯಿತೋ naturally public debate starts. ಆಗ ನ್ಯಾಚ್ಯುರಲಿ ಪಬ್ಲಿಕ್ ಡಿಮ್ಯಾಂಡ್ ಸ್ಟಾರ್ಟ್ ಆಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಆದ್ದರಿಂದ ಅಧ್ಯಕ್ಷರೆ, ಸದನದಿಂದ ಒಂದು ಸಂದೇಶ ಹೋಗಬಾರದು. ಅವಸರವಾಗಿ ಈ ಕಡೆಯವರು ಚರ್ಚೆ ಮಾಡುತ್ತಿದ್ದೇವೆ ಎಂಬ ಸಂದೇಶ ಹೋಗಬಾರದು. ನಾವು ಅವಸರ ಮಾಡುವ ಪ್ರಶ್ನೆಯೇ ಇಲ್ಲ. The report has become public. ಈಗ ಏನಾಗಿದೆ ಎಂದರೆ ಕೆಲವು ಸದಸ್ಯರಿಗೆ ಆತಂಕ ಇರಬಹುದು. ಈ ರಾಜ್ಯದ ವಿಚಾರ, ರಾಜ್ಯದ ಜಮೀನಿಗೆ ಸಂಬಂಧಪಟ್ಟದ್ದುದು, ರಾಜ್ಯದ ಜನರ ಮೇಲೆ ಪರಿಣಾಮವಾಗತಕ್ಕಂತಹ ವಿಚಾರ.. suppose in the course discussion certain points emerge.. ಆದರಲ್ಲಿ ಜರೂರಾಗಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಬಂದರೆ

ಶ್ರೀ ಎಚ್. ಏಕಾಂತಯ್ಯ:– ವಿಚಾರಣಾ ಆಯೋಗದ ಮೇಲೆ ಇವರು ಹೇಗೆ ಕ್ರಮ ತೆಗೆದುಕೊಳ್ಳುತ್ತಾರೆಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:– ಚರ್ಚೆಯಿಂದ ಬರಬೇಕು.

SRI H. EKANTHAIAH:- I am on a point of order.

ಶ್ರೀ ಎಂ. ವೀರಪ್ಪ ಮೊಯಿಲಿ:– ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಎಲ್ಲಿ ಬರುತ್ತದೆ ಅಧ್ಯಕ್ಷರೇ? I am on my legs.

ಅಧ್ಯಕ್ಷರು:– ಇದರಲ್ಲಿ ಏನು ಬರುತ್ತದೆ ಪಾಯಿಂಟ್ ಆಫ್ ಆರ್ಡರ್?

ಶ್ರೀ ಎಚ್. ಏಕಾಂತಯ್ಯ:– ಕೇಂದ್ರ ಸರ್ಕಾರದವರು ಈ ವಿಚಾರಣಾ ಆಯೋಗವನ್ನು ನೇಮಕ ಮಾಡಿದ್ದುದು, ಆ ವಿಚಾರಣಾ ಆಯೋಗದ ಮೇಲೆ ರಾಜ್ಯ ಸರ್ಕಾರದವರು ಕ್ರಮ ತೆಗೆದು ಕೊಳ್ಳಬಹುದೆ?

ಶ್ರೀ ಎಂ. ವೀರಪ್ಪ ಮೊಯಿಲಿ:– ಅದು ನನಗೆ ಗೊತ್ತಿಲ್ಲ. There are certain public issues.

ಶ್ರೀ ಎಚ್. ಏಕಾಂತಯ್ಯ:- ಆ ಬಗ್ಗೆ ನಾನು ಪ್ರಶ್ನೆ ಮಾಡುತ್ತಿಲ್ಲ. ಆದರೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆಂಬ ಮಾತನ್ನು ನೀವು ಹೇಳಿದ ಮೇಲೆ ನಾನು ಪ್ರಶ್ನೆ ಮಾಡಿದ್ದುದು.

ಶ್ರೀ ಎಂ. ವೀರಪ್ಪ ಮೊಯಿಲಿ:– ತಾವು ಅರ್ಥಮಾಡಿಕೊಳ್ಳಬೇಕು. ಪ್ರಶ್ನೆ ಇಷ್ಟೆ. ಇಲ್ಲಿ ಸಾರ್ವಜನಿಕ ಸಮಸ್ಯೆಯ ಬಗ್ಗೆ ಕೆಲವು ಚರ್ಚೆ ಬರುತ್ತವೆ. ಪಬ್ಲಿಕ್ ಇಂಪಾರ್ಟೆನ್ಸ್‌ಗೋಸ್ಕರವೇ ರೂಲ್ 68 ಇರತಕ್ಕಂತಹದ್ದು ಒಂದು ಸಾರ್ವಜನಿಕ ಮಹತ್ವವಾದ ವಿಚಾರವೇ ಇಲ್ಲಿರುವಂತದ್ದು. ಇದರಿಂದಾಗಿ ಸಾರ್ವಜನಿಕವಾಗಿ ಎತ್ತಬೇಕಾದ ಕೆಲವು ಪರಿಸ್ಥಿತಿ ಉದ್ಭವವಾಗುತ್ತದೆ. ಆದರೆ ಅಂತಹ

ಪರಿಸ್ಥಿತಿ ಉದ್ಭವವಾದಾಗ ಪರಿಸ್ಥಿತಿಯನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರ ತುರ್ತು ಕ್ರಮ ತೆಗೆದುಕೊಳ್ಳಬೇಕಾದರೆ, ಸರ್ಕಾರ ಮಾಡಬೇಕಾಗುತ್ತದೆ. This is a matter of public importance.

ಎರಡನೆಯದಾಗಿ ಪ್ರಶ್ನೆ ಈಗ ಉಳಿದಿರುವುದು, ಕೇಂದ್ರ ಸರ್ಕಾರ ಅಥವಾ ಲೋಕ ಸಭೆಯವರು ಇದನ್ನು ತಿರಸ್ಕಾರ ಮಾಡಬಹುದು. ಈಗ ನಾವು ವಸ್ತು ಸ್ಥಿತಿಯನ್ನು ಚರ್ಚೆ ಮಾಡುವಂತಹದ್ದು. ವಸ್ತು ಸ್ಥಿತಿಯ ಮೇಲೆ ಚರ್ಚೆ ಮಾಡಿದರೆ ಏನಾಗುತ್ತದೆ? I do not want to be hypothetical on that question. That is why I am answering. ಲೋಕ ಸಭೆ ವಿಸರ್ಜನೆಯಾಗಬಹುದು. ಮತ್ತೊಂದು ಆಗಬಹುದು ಅದು ನಮಗೆ ಬೇಕಾಗಿಲ್ಲ. ಲೋಕ ಸಭೆ ರದ್ದಾಗಬಹುದು. ಕೇಂದ್ರ ಸರ್ಕಾರ ರದ್ದಾಗಬಹುದು that is not the question before us. ಅಧ್ಯಕ್ಷರೆ now it has become a public document. Another message should not go as interpretation. ಹೋದ ಸಾರಿಯೂ ಸದನವನ್ನು ಕರೆದಿದ್ದೇವೆ. ಈ ಸಾರಿಯೂ ಕಳೆದ 30 ದಿವಸಗಳಿಂದ ಸದನದಲ್ಲಿ ಚರ್ಚೆ ನಡೆಯುತ್ತಿದೆ. ಅನೇಕ ಇಂತಹ ಜಟಿಲ ಪ್ರಶ್ನೆಗಳು ಬಂದಾಗ, ಔಚಿತ್ಯದ ಪ್ರಶ್ನೆಗಳು ಬಂದಾಗ, ತಾವು ಯಾವಾಗಲೂ ಹೇಳಿದ್ದೀರಿ, ಟೆಲಿಫೋನ್ ಟ್ಯಾಪಿಂಗ್‌ನ ವಿಚಾರ ಬಂದಾಗಲೂ ಹೇಳಿದ್ದೀರಿ, ತಾವು ತೀರ್ಪನ್ನು ಕೊಡುವಾಗ ಈ ವಿಚಾರವನ್ನು ಎತ್ತಬಹುದೇ ಅಥವಾ ಬೇಡವೆ ಎಂಬುದರ ಬಗ್ಗೆ ತೀರ್ಪನ್ನು ಕೊಡುವುದು ಮಾತ್ರವಲ್ಲ. ಅದರ ಮೇಲೆ ಪ್ಯಾರಾಮಿಟರ್ಸ್‌ನ್ನೂ ಕೂಡ ನಿಗದಿ ಮಾಡಿದ್ದೀರಿ. ಏಕೆಂದರೆ ವಿರೋಧ ಪಕ್ಷದ ನಾಯಕರು ಪ್ಯಾರಾಮಿಟರ್ಸ್ ಡಿಸ್‌ಕಷನ್ ಯಾರ ರೀತಿ ಇರಬೇಕೆಂಬುದನ್ನು ಒಂದು ಸಾರಿ ಹೇಳಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಹೇಳಿಯೇ ಇಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ:- ನೀವು ಹೇಳಿದ್ದೀರಿ. I want that things should be conveyed properly. ಪ್ಯಾರಾ ಮಿಟರ್ಸ್ ನಿಗದಿಮಾಡಿ ಚರ್ಚೆ ಮಾಡುವುದು ಹೊಸದೇನಲ್ಲ. ಹಿಂದಿನ ಸ್ಪೀಕರ್‌ರವರೂ ಆ ರೀತಿ ನಿಗದಿ ಮಾಡಿದ್ದಾರೆ. ತಾವೂ ಸಹ ಚಾಚೂ ತಪ್ಪದೆ ಈ ಔಚಿತ್ಯದ ಪ್ರಶ್ನೆಯನ್ನು ಸದನದಲ್ಲಿ ಎತ್ತಿದಾಗ ಪ್ಯಾರಾ ಮಿಟರ್‌ನ್ನು ನಿಗದಿ ಮಾಡಿಯೇ ತಾವು ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. It is on record. ಆದ್ದರಿಂದ ಈ ಪ್ರಶ್ನೆ ಔಚಿತ್ಯದ ಪ್ರಶ್ನೆಯನ್ನು ಎತ್ತಿದಾಗ ತೀರ್ಪು ಕೊಟ್ಟಿದ್ದೀರಿ. ಬಹುಶಃ ತಮ್ಮ ತೀರ್ಪಿನ ಮೇಲೆ ಪುನಃ ಚರ್ಚೆ ಮಾಡುವಂತದ್ದು ಸರಿಯಾದುದಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಇವರನ್ನು ಉತ್ತರ ಹೇಳಿ ಅಂದರೆ ಏನಾದರೂ ಗೊಂದಲವನ್ನು ನಿರ್ಮಾಣ ಮಾಡುತ್ತಾರೆ. ನಾನು ಅದರ ಮೇಲೆ ಕೇಳಿಯೇ ಇಲ್ಲ. ನಾನು ಹೇಳದೇ ಇರುವ ವಿಷಯದ ಬಗ್ಗೆ ಹೇಳಿದ್ದೇನೆಂದು ವ್ಯಾಖ್ಯಾನ ಮಾಡುತ್ತಾರೆ.

ಶ್ರೀ ವಾಟಾಳ್‌ನಾಗರಾಜ್:- ಒಂದು ಪ್ರಶ್ನೆಯನ್ನು ತಮ್ಮಲ್ಲಿ ಕೇಳುವುದು ಇದೆ. ಕೇಂದ್ರದಲ್ಲಿ 3 ಜನ ಸಚಿವರು ರಾಜೀನಾಮೆ ಕೊಟ್ಟಿದ್ದಾರೆ.

ಅಧ್ಯಕ್ಷರು:- ಪೇಪರ್‌ನಲ್ಲಿ ಬಂದಿರುವುದನ್ನು ನಾನೂ ಓದಿದ್ದೇನೆ.

ಶ್ರೀ ವಾಟಾಳ್‌ನಾಗರಾಜ್:- ಪೇಪರ್‌ನಲ್ಲಿ ಬಂದಿರುವುದು ಸರಿಯಲ್ಲ ಎಂಬುದು ತಮ್ಮ ವಾದವೇ? ತಾವೂ ಓದಿದ್ದೀರಿ. ನಾನು ಪೇಪರ್‌ನಲ್ಲಿ ಬಂದಿರತಕ್ಕಂತದ್ದು ನಿಜ ಎಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು:- ರಾಜೀನಾಮೆ ಯಾರಿಗೆ ಕೊಟ್ಟಿದ್ದಾರೆ ಅವರು?

ಶ್ರೀ ವಾಟಾಳ್‌ನಾಗರಾಜ್:- ಪ್ರಧಾನ ಮಂತ್ರಿಗಳಿಗೆ ಸಲ್ಲಿಸಿದ್ದಾರೆ. ಮತ್ತು ಈಗ ಪ್ರಧಾನ ಮಂತ್ರಿಗಳೇ ರಾಜನಾಮೆ ಕೊಡುತ್ತೇನೆಂದು ಹೇಳಿದ್ದಾರೆ. ಇಂತಹ ಪ್ರಶ್ನೆ ಬಂದಿರುವಾಗ ಸರ್ಕಾರಕ್ಕೆ ಏನೂ ಗೊತ್ತಿಲ್ಲ ಎನ್ನುವುದಾದರೆ...

ಅಧ್ಯಕ್ಷರು:- ಈಗ ಪ್ರಧಾನ ಮಂತ್ರಿಗಳು ಯಾರಿಗೆ ರಾಜೀನಾಮೆ ಕೊಟ್ಟಿದ್ದಾರೆಂದು ನ್ಯೂಸ್ ಸಂಸ್ಥೆಗಳು ಹೇಳಿವೆ?

ಶ್ರೀ ವಾಟಾಳ್‌ನಾಗರಾಜ್:– ನಿಮ್ಮ ನಾಯಕರನ್ನು ಚುನಾವಣೆ ಮಾಡಿಕೊಳ್ಳಿ ಎಂದು ಜನತಾ ದಳದ ಅಧ್ಯಕ್ಷರಿಗೂ ರಾಷ್ಟ್ರೀಯ ರಂಗದ ಅಧ್ಯಕ್ಷರಿಗೂ ಹೇಳಿದ್ದಾರೆ. ಪ್ರಧಾನಿಯವರು ಈ ವಿಷಯ ಹೇಳಿದ ಮೇಲೆ ಅದು ಸಣ್ಣ ವಿಚಾರವಲ್ಲ.

ಅಧ್ಯಕ್ಷರು:– ನಾನೇನು ಮಾಡಬೇಕು ಹೇಳಿ ಈಗ.

ಶ್ರೀ ವಾಟಾಳ್‌ನಾಗರಾಜ್:– ದಯಮಾಡಿ ಸರ್ಕಾರಕ್ಕೆ ಏನು ಗೊತ್ತಿದೆ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಕೇಂದ್ರದಲ್ಲಿ ಏನಾಗಿದೆ, ಈ ಸಂಬಂಧದಲ್ಲಿ ಸರ್ಕಾರಕ್ಕೆ ಏನು ಗೊತ್ತಿದೆ ಎಂಬುದನ್ನು ಹೇಳಲಿ. ಸಭೆ ನಡೆಯುತ್ತಿದೆ ಇಲ್ಲಿ. ಮಾನ್ಯ ಮುಖ್ಯಮಂತ್ರಿಗಳಿಗೆ ಏನೂ ಗೊತ್ತಿಲ್ಲ, ನಾನು ಕಣ್ಣು, ಕಿವಿ ಎಲ್ಲಾ ಮುಚ್ಚಿಕೊಂಡು ಕುಳಿತಿದ್ದೇನೆ ಎಂದು ಹೇಳಿದರೆ ನನಗೆ ಆಶ್ಚರ್ಯವಾಗುತ್ತದೆ. ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಅಧ್ಯಕ್ಷರೆ ಸರ್ಕಾರಕ್ಕೆ ಏನು ಗೊತ್ತಿದೆ, ಏನು ಅಲ್ಲಿ ನಡೆದಿದೆ ಎಂಬುದನ್ನು ದಯಮಾಡಿ ಸ್ವಲ್ಪ ಹೇಳಲಿ.

ಶ್ರೀ ಎ. ಬಸವರಾಜ್:– ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜರನ್ನು ಡೆಲ್ಲಿಗೆ ಕಳುಹಿಸುವುದು ಒಳ್ಳೆಯದು.

ಶ್ರೀ ವೀರೇಂದ್ರಪಾಟೀಲ್:– ಕೇಂದ್ರದಲ್ಲಿ ಏನಾದರೂ ದುರ್ದೈವದ ಡೆವಲಪ್‌ಮೆಂಟ್ ಆಗಿದ್ದಾಗ ರಾಜ್ಯ ಸರ್ಕಾರಕ್ಕೆ ತಿಳಿದುಕೊಳ್ಳುವುದಕ್ಕೆ ಇರುವುದು ಎರಡೇ ವಿಧಾನ. ಒಂದು ಟೆಲಿ ಪ್ರಿಂಟರ್ ಸರ್ವೀಸ್‌ನಿಂದ ತಿಳಿದುಕೊಳ್ಳಬಹುದು, ಇನ್ನೊಂದು ಆಲ್ ಇಂಡಿಯಾ ರೇಡಿಯೋ ಅಥವಾ ಟೆಲಿವಿಷನ್‌ನಲ್ಲಿ ಏನು ಬರುತ್ತದೆ ಎಂಬುದನ್ನು ಕೇಳಿ ತಿಳಿದುಕೊಳ್ಳುವುದು. ರಾಜ್ಯ ಸರ್ಕಾರದಲ್ಲಿ ಏನಾದರೂ ಆಗಿದೆ ಎಂದರೆ ಪಾರ್ಲಿಮೆಂಟ್‌ನಲ್ಲಿ ಕೇಳುವುದು ಸ್ವಾಭಾವಿಕ. ಏಕೆಂದರೆ ಕೇಂದ್ರ ಸರ್ಕಾರದ ಜವಾಬ್ದಾರಿ ಇರುತ್ತದೆ. ಇಡೀ ದೇಶದಲ್ಲಿ ಯಾವ ಯಾವ ರಾಜ್ಯದಲ್ಲಿ ಏನೇನು ಡೆವಲಪ್‌ಮೆಂಟ್ ಆಗುತ್ತದೆ ಎಂಬುದನ್ನು ತಿಳಿದುಕೊಳ್ಳುವ ಜವಾಬ್ದಾರಿ ಅದಕ್ಕಿರುತ್ತದೆ. ಆದರೆ ಕೇಂದ್ರದಲ್ಲಿ ಏನಾಗುತ್ತಿದೆ ಎಂಬುದನ್ನು ರಾಜ್ಯ ಸರ್ಕಾರ ತಿಳಿದುಕೊಳ್ಳಬೇಕು ಎಂದು ಇವರು ಹೇಳುತ್ತಿದ್ದಾರೆ. ಅದನ್ನು ಹೇಗೆ ತಿಳಿದುಕೊಳ್ಳುವುದಕ್ಕಾಗುತ್ತದೋ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ವಾಟಾಳ್‌ನಾಗರಾಜ್:– ಬುಡವೇ ಅಲ್ಲಾಡುತ್ತಿದೆ.

ಶ್ರೀ ವೀರೇಂದ್ರಪಾಟೀಲ್:– ನೀವು ಅಲ್ಲಿ ಇಲ್ಲಿ ಕೇಳುವುದು ಬೇಡ. ಪ್ರೆಸ್ ಗ್ಯಾಲರಿಗೆ ಹೋದರೆ ಎಲ್ಲಾ ಹೇಳುತ್ತಾರೆ ಏನೇನಾಗಿದೆ ಎಂದು.

ಶ್ರೀ ವಾಟಾಳ್‌ನಾಗರಾಜ್:– ಈ ಸಭೆ ಇರುವುದು ಪ್ರೆಸ್ ಗ್ಯಾಲರಿಯಲ್ಲಿ ಕೇಳುವುದಕ್ಕೆ ಅಲ್ಲ. ಮಾನ್ಯ ಅಧ್ಯಕ್ಷರೆ, ತಾವು ತೀರ್ಪು ಕೊಡುವುದಾದರೆ ಸಂತೋಷಪಡುತ್ತೇನೆ.

ಅಧ್ಯಕ್ಷರು:– ಮಾನ್ಯ ಬನ್ನಿಕೋಡ್ ಅವರು ಹೇಳುತ್ತಾರೆ ಏನು ನಡೆದಿದೆ ಎಂದು.

ಶ್ರೀ ಬಿ.ಎಚ್. ಬನ್ನಿಕೋಡ್:– ಕೇಂದ್ರದಲ್ಲಿ ಏನಾದರೂ ನಡೆದಿದ್ದರೆ ರಾಜ್ಯ ಸರ್ಕಾರದ ಮೇಲೆ ಪರಿಣಾಮ ಬೀರುತ್ತದೇನೋ ಎಂದು ವಾಟಾಳ್ ನಾಗರಾಜ್ ಅವರು ಕೇಳುತ್ತಿದ್ದಾರೆ.

ಶ್ರೀ ವಾಟಾಳ್‌ನಾಗರಾಜ್:– ಮಾನ್ಯ ಮುಖ್ಯಮಂತ್ರಿಗಳು ಎಷ್ಟು ಗಂಭೀರವಾಗಿ ತಪ್ಪಿಸಿಕೊಂಡರು ಎಂದರೆ ಏನೂ ಗೊತ್ತೇ ಇಲ್ಲ, ಏನಾದರೂ ನಡೆದಿದ್ದರೆ ಪ್ರೆಸ್‌ನವರನ್ನು ಕೇಳಿ ಎಂದರು. ನಾವು ಸದಸ್ಯರಾಗಿ ಈ ಸಭೆಯಲ್ಲಿ ಏನು ಮಾಡಬೇಕು? ತಮ್ಮ ಅಧ್ಯಕ್ಷತೆಯಲ್ಲಿ ಸಭೆ ನಡೆಯುತ್ತಿದೆ.

ಅಧ್ಯಕ್ಷರು:– ನೀವು ಏನು ಸೂಚನೆ ಮಾಡುತ್ತಿದ್ದೀರಿ? ಎನ್.ಟಿ.ರಾಮರಾಯರು ದೆಹಲಿಗೆ ಧಾವಿಸಿದರು. ಈ ಮುಖ್ಯಮಂತ್ರಿಗಳೂ ದೆಹಲಿಗೆ ಧಾವಿಸಬೇಕು ಎಂದು ಅಪೇಕ್ಷೆ ಪಡುತ್ತೀರಾ?

ಶ್ರೀ ವಾಟಾಳ್ ನಾಗರಾಜ್:– ನನ್ನ ಅಪೇಕ್ಷೆ ಅದಲ್ಲ.

ಅಧ್ಯಕ್ಷರು:– ಇನ್ನೇನು ಮಾಡಬೇಕು ಎನ್ನುತ್ತೀರಿ ಅವರು?

ಶ್ರೀ ವಾಟಾಳ್ ನಾಗರಾಜ್:– ನನಗೆ ಗೊತ್ತಿಲ್ಲ ಎಂದು ಹೇಳಿದರು ಅವರು.

ಅಧ್ಯಕ್ಷರು:- ಗೊತ್ತಿಲ್ಲ ಎಂದು ಹೇಳಲಿಲ್ಲ. ಟೆಲಿಪ್ರಿಂಟರ್‌ನಿಂದ ಮೆಸೇಜ್ ತಿಳಿದುಕೊಳ್ಳಬೇಕು ಎಂದರು.

ಶ್ರೀ ವಾಟಾಳ್‌ನಾಗರಾಜ್:- ಟೆಲಿಪ್ರಿಂಟರ್ ಮೂಲಕ ಮತ್ತು ಆಕಾಶವಾಣಿ ಮೂಲಕ ಗೊತ್ತಾಗುತ್ತದೆ. ಅದಿಲ್ಲ ಅಂದರೆ ಪತ್ರಿಕೆಯವರಲ್ಲಿ ಕೇಳಿಕೊಳ್ಳಿ ಎಂದರು. ಜವಾಬ್ದಾರಿಯುತವಾದ ನಾಯಕರು ತಮಗೆ ತಿಳಿದಿರುವುದನ್ನು ಹೇಳಬೇಕು.

ಒಬ್ಬ ಮಾನ್ಯ ಸದಸ್ಯರು:- ವಾಟಾಳ್ ನಾಗರಾಜ್ ಅವರು ಮುಖ್ಯಮಂತ್ರಿಗಳನ್ನು ಕೇಳುವ ಬದಲು ಚಂದ್ರೇಗೌಡರನ್ನು ಕೇಳಿದರೆ ಒಳ್ಳೆಯದು.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ ತಮ್ಮ ಅಧ್ಯಕ್ಷತೆಯಲ್ಲಿ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ 1 ಘಂಟೆಗೆ ಸಭೆಯನ್ನು ಮುಗಿಸಬೇಕು ಎಂದು ತೀರ್ಮಾನ ಮಾಡಲಾಗಿತ್ತು. ತಾವು ಒಂದು ತೀರ್ಪು ಕೊಡುತ್ತೀರಿ ಎಂದು ನಾವು ಕಾಯುತ್ತಿದ್ದೆವು. ಇವತ್ತು ಎರಡನೇ ಶನಿವಾರ. ಇವತ್ತೂ 5 ಘಂಟೆಯವರೆಗೆ ಕುಳಿತುಕೊಳ್ಳುವುದು ನಿಮ್ಮ ಮನಸ್ಸಿಗೆ ಒಪ್ಪಿದರೆ ಸರಿ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗಿದೆ. ಅದರ ವಿರುದ್ಧ ಹೋಗುವುದಾದರೆ ನನ್ನ ಅಭ್ಯಂತರ ಇಲ್ಲ.

MR. SPEAKER:- I am entitled to be pulled up by the leader of the opposition. Very rarely it is done. But I am entitled to it. It was agreed. The Hon'ble Minister for Parliamentary Affairs was on his legs when we had the Business Advisory Committee Meeting. the Leader of the House was present & the Hon'ble Min. for Agriculture was present and the Leader of the Opposition was also present. It was agreed.

ಶ್ರೀ ವಾಟಾಳ್ ನಾಗರಾಜ್:- ರಾತ್ರಿ ಒಂದು ಘಂಟೆ ಆದರೂ ಕುಳಿತುಕೊಳ್ಳಬೇಕಾಗುತ್ತದೆ.

MR. SPEAKER:- I would be guided by the Leader of the House on this.

ಶ್ರೀ ವೀರೇಂದ್ರಪಾಟೀಲ್:- ತಾವು ಸಭಾಧ್ಯಕ್ಷರು, ತಾವು ಏನು ನಿರ್ಣಯ ಮಾಡುತ್ತೀರಿ ಅದರ ಪ್ರಕಾರ ನಾವು ನಡೆದುಕೊಳ್ಳುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ:- ನಾವು ನೀವು ಸೇರಿ ಮಾಡಿದಂತಹ ನಿರ್ಣಯ ಏನಾಯಿತು?

ಶ್ರೀ ವಾಟಾಳ್‌ನಾಗರಾಜ್:- ಮುಖ್ಯ ಮಂತ್ರಿಗಳು ಯಾವುದಕ್ಕೂ ಸಿಗುವುದಿಲ್ಲ. ಇವತ್ತು ಎರಡನೆಯ ಶನಿವಾರ ರಜೆ ಇದೆ ಬೇಡವೆಂದು ಹೇಳಿದೆವು ತಾವು ಒಪ್ಪಿದ್ದಿರಿ. ಆದರೆ ಸರ್ಕಾರದವರು ಆಗಲೇ ಬೇಕು ಎಂದು ಹೇಳಿದರು ಬೆಳಿಗ್ಗೆ 9 ಗಂಟೆಯಿಂದ ಇಲ್ಲಿ ಕುಳಿತ್ತಿದ್ದೇವೆ ಈಗಾಗಲೇ 5 ಗಂಟೆಯಾಗಿದೆ, ಉತ್ತರವನ್ನು ಸೋಮವಾರ ಕೊಡಲಿ.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ:- ವಿರೋಧ ಪಕ್ಷದ ನಾಯಕರ ಮೂಡ್ ಚೆನ್ನಾಗಿಲ್ಲ. ದೆಹಲಿಯ ಡೆವಲಪ್‌ಮೆಂಟ್ಸ್‌ಗಳನ್ನು ನೋಡಿ ಅವರು perturb ಆಗಿದ್ದಾರೆ.

ಶ್ರೀ ಎಸ್. ಬಂಗಾರಪ್ಪ:- ಬಿಸಿನೆಸ್ ಅಡ್ವೈಸರಿ ಕಮಿಟಿಯ ಸಭೆಯಲ್ಲಿ ತೀರ್ಮಾನ ಆಗಿರತಕ್ಕ ವಿಚಾರ ತಮಗೆ ಗೊತ್ತಿದೆ. ಅದರ ಮೇಲೆ ನಾನು ಕಾಮೆಂಟ್ಸ್ ಮಾಡಲು ಹೋಗುವುದಿಲ್ಲ. ಕುಲದೀಪ್‌ಸಿಂಗ್ ಆಯೋಗದ ವರದಿ ವಿಚಾರದಲ್ಲಿ ತಮ್ಮ ರೂಲಿಂಗ್ ಬಗ್ಗೆ ಕಾಯುತ್ತಾ ಇದ್ದೆವು ಎನ್ನತಕ್ಕ ಮಾತನ್ನು ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಅದನ್ನು ಇಲ್ಲ ಎನ್ನತಕ್ಕ ಮಾತನ್ನು ನಾನು ಹೇಳುವುದಿಲ್ಲ.. That is also not at all my point. ನಾನು ಏನು ಹೇಳುತ್ತೇನೆಂದರೆ, ಮೂರುಜನ ಸಚಿವರು ಇವ್ಹೊತ್ತು ಉತ್ತರಕೊಡಬೇಕೆಂದು ಇದ್ದೆವು. ಇವತ್ತು ನಾನು ಮತ್ತು ಶ್ರೀ ಬಸವಲಿಂಗಪ್ಪನವರು ಉತ್ತರ ನೀಡಿ, ಮಾನ್ಯ ಫೋರ್ಡೆಯವರು ಮುಖ್ಯಮಂತ್ರಿಯವರು ಉತ್ತರ ಕೊಡುವ ದಿನ ಅಂದರೆ ಸೋಮವಾರ ಉತ್ತರ ಕೊಡಬಹುದೆಂದು ಯೋಜನೆ ಮಾಡಿದ್ದೇವೆ. ಇವತ್ತು ಅತಿ ಕಡಿಮೆ ಕಾಲದಲ್ಲಿ ನಾನು ಹಾಗೂ ಶ್ರೀ ಬಸವಲಿಂಗಪ್ಪನವರು ಉತ್ತರ ಕೊಟ್ಟು ಮುಗಿಸಿದರೆ ಹೇಗೆ ಅನ್ನತಕ್ಕ ಸಲಹೆಯನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಎರಡನೆಯ ವಿಚಾರ ಏನೆಂದರೆ ನಾನು ತಮಗೆ ಮೊದಲೇ ಅರಿಕೆ ಮಾಡಿಕೊಂಡಿದ್ದೇನೆ, ನಾನು ಸೋಮವಾರ ಇಲ್ಲಿ ಇರಲು ಸಾಧ್ಯವಿಲ್ಲ. ತಮ್ಮ ಅಪ್ಪಣೆಯನ್ನು ಪಡೆದು ಈ ವಿಷಯವನ್ನು ತಮಗೆ ತಿಳಿಸಿದ್ದೇನೆ. ಆದ್ದರಿಂದ ನನಗೆ ಇವತ್ತು ಉತ್ತರಕೊಡಲು ಅವಕಾಶ ಮಾಡಿಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು:– ಅವರು ನಿಮ್ಮನ್ನು ಕೇಳುತ್ತಿದ್ದಾರೆ.

SRI D.B. CHANDRE GOWDA:- I don't want to go beyond the decision of what we have taken. That is all. I leave it to you.

SRI M.V. VENKATAPPA:- You can take the consensus of the House at this stage.

MR. SPEAKER: That is not the way to go about deciding the opinion. I had to, you know, what I had to...

ಶ್ರೀ ವೀರೇಂದ್ರಪಾಟೀಲ್:– ನನ್ನ ಸಹೋದ್ಯೋಗಿಯಾದ ಶ್ರೀ ಬಂಗಾರಪ್ಪನವರು ನಾಡಿದ್ದು ಇರುವ ಹಾಗೆ ಇಲ್ಲ, ಇದ್ದಿದ್ದರೆ ನಾನು ಯೋಚನೆ ಮಾಡುತ್ತಿದ್ದೆ ಎಲ್ಲರೂ ನಾಡಿದ್ದು ಬೆಳಿಗ್ಗೆ 9 ಗಂಟೆಯಿಂದ 1 ಗಂಟೆಯವರೆಗೆ ಉತ್ತರ ಕೊಡುವುದು ನಂತರ ಅಪ್ರೋಪ್ರಿಯೇಷನ್ ಬಿಲ್ ಎಲ್ಲಾ ಪ್ರೊರ್ತಿಯಾದ ಮೇಲೆ ಯಾವ ದಿವಸವನ್ನು ತಾವು ನಿಗದಿ ಮಾಡುತ್ತೀರಿ ಆಗ ಕುಲದೀಪ್ ಸಿಂಗ್ ಕಮಿಷನ್ ವರದಿಯನ್ನು ತೆಗೆದುಕೊಳ್ಳೋಣವೆಂದು. ಈಗ ಶ್ರೀ ಬಂಗಾರಪ್ಪನವರು ಉತ್ತರವನ್ನು ಕೊಡಲಿ ಏತಕ್ಕೆಂದರೆ ಅವರು ನಾಡಿದ್ದು ಇರಲಿಕ್ಕೆ ಸಾಧ್ಯವಾಗುವುದಿಲ್ಲ ಎಂಬುದನ್ನು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ ಅವರು ಅದಷ್ಟು ಸಂಕ್ಷಿಪ್ತವಾಗಿ ತಮ್ಮ ಉತ್ತರ ನೀಡುತ್ತಾರೆ. ಅವರು ಒಬ್ಬರು ಉತ್ತರ ಕೊಡಲು ತಾವು ಅವಕಾಶ ಮಾಡಿಕೊಟ್ಟರೆ ಉಳಿದ ನಾವು ಮೂರು ಜನರು ನಾಡಿದ್ದು ನಮ್ಮ ಉತ್ತರ ಕೊಡುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ:– ಶ್ರೀ ಬಂಗಾರಪ್ಪನವರ ಉತ್ತರ ಸಂಕ್ಷಿಪ್ತವಾಗುತ್ತದೆಯೇ ಎಂದು ನಮ್ಮ ಸಂಕಟ.

ಕೃಷಿ ಮತ್ತು ತೋಟಗಾರಿಕೆ ಸಚಿವರಿಂದ ಉತ್ತರ

† ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು):- ಮಾನ್ಯ ಸಭಾಧ್ಯಕ್ಷರೆ, ಮೊಟ್ಟಮೊದಲನೆಯದಾಗಿ ನನ್ನ ಉತ್ತರಕ್ಕೆ ಈ ದಿನವೇ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ತಮಗೂ ಹಾಗೂ ವಿರೋಧ ಪಕ್ಷದ ನಾಯಕರಿಗೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ನನಗೆ ಅಭಿನಂದನೆಗಳನ್ನು ಹೇಳಲೇ ಇಲ್ಲವಲ್ಲ

ಶ್ರೀ ಎಸ್. ಬಂಗಾರಪ್ಪ:– ನನಗೆ ಕೂಡಲೇ ತಮ್ಮ ಬಗ್ಗೆ ಮರಳು ಬರುತ್ತದೆಂದು ನಾನು ಭಾವಿಸಿರಲಿಲ್ಲ. ನಾನು ಆದಷ್ಟು ಸಂಕ್ಷಿಪ್ತವಾಗಿ ಉತ್ತರಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಏಕೆಂದರೆ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಎಲ್ಲಾ ಮಾನ್ಯ ಸದಸ್ಯರು ಮನೆಗಳಿಗೆ ಹೋಗುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದಕ್ಕೆ ತಡವಾಗುತ್ತಿದೆ ಎನ್ನುವ ದೃಷ್ಟಿಯಿಂದ ಈ ಅಭಿಪ್ರಾಯವನ್ನು ಹೇಳಿದ್ದಾರೆ.. ಅದಕ್ಕೆ ಸಂಕ್ಷಿಪ್ತವಾಗಿ ಉತ್ತರಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ನನಗೆ ಸಂಬಂಧಪಟ್ಟಿರತಕ್ಕಂತಹ ಬೇಡಿಕೆ ನಂ. 1, 2, 3 ವಾಟರ್ ಷೇರ್, ಆಗ್ರಿಕಲ್ಚರಲ್ ಮತ್ತು ತೋಟಗಾರಿಕೆ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಮಾನ್ಯ ಸದಸ್ಯರುಗಳು ಏನು ಪ್ರಾಮಾಣಿಕವಾಗಿ ಹೇಳತಕ್ಕ ವಿಚಾರಗಳನ್ನು ಕೂಡ ಚರ್ಚೆಯ ಕಾಲದಲ್ಲಿ ವ್ಯಕ್ತಪಡಿಸಿದ್ದಾರೆ. ನನಗೆ ಒಂದೇ ಒಂದು ವ್ಯಥೆ ಏನೆಂದರೆ ಈ ಒಂದು ಇಲಾಖೆಯ ಮೇಲೆ ಬೇರೆ ಇಲಾಖೆಗಳು ಯಾವುವು ಇವೆ ಅವುಗಳು ಅಮುಖ್ಯವಾದವುಗಳು ಎಂದು ಹೇಳುತ್ತಿಲ್ಲ. ಎಲ್ಲಾ ಇಲಾಖೆಗಳೂ ಕೂಡ ಅಷ್ಟೇ ಮುಖ್ಯವಾದವುಗಳು. ಆದರೆ ವ್ಯವಸಾಯದ ಅರ್ಥದ ವ್ಯಾಪ್ತಿಯಲ್ಲಿ ಇರತಕ್ಕ ಇಲಾಖೆಗಳು ಕೃಷಿ ಮತ್ತು ತೋಟಗಾರಿಕೆ, ಈ ಇಲಾಖೆಗಳ ಮೇಲೆ ಹೆಚ್ಚಿನ ಕಾಲವನ್ನು ಖರ್ಚು ಮಾಡಿ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಕಾಲಾವಕಾಶದ ಅಭಾವ ಇದ್ದರೂ ಇಷ್ಟೊಂದು ಕಾಲಾವಕಾಶವನ್ನು ಮಾನ್ಯ ಸಭಾಧ್ಯಕ್ಷರು ಕಷ್ಟಪಟ್ಟು ನಿಗದಿ ಮಾಡಿಕೊಟ್ಟಿದ್ದಾರೆ. ನಾನು ಈ ಸಂದರ್ಭದಲ್ಲಿ ಸದಸ್ಯರ ಪರವಾಗಿ ಅವರನ್ನು ಅಭಿನಂದಿಸುತ್ತೇನೆ. ಆದ್ದರಿಂದ ಕೊನೆಯಪಕ್ಷ ಇಷ್ಟಾದರೂ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಸಾಧ್ಯವಾಯಿತು. ನನಗೆ